**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

**ಸಿ.ಸಿ ನಂ. 33/2018** ಸಿ.ಡಬ್ಲ್ಯೂ -18

ಪಿ.ಡಬ್ಲ್ಯೂ -12

ಹೆಸರು : ಪರಮಾನಂದ

ತಂದೆ:ಗಂಡ : ಬಸಲಿಂಗಪ್ಪ

ವಯಸ್ಸು : 42 ವರ್ಷ

ಉದ್ಯೋಗ : ಮೋಟಾರ ವಾಹನ ಇನಸ್ಪಕ್ಟೆರ

ವಾಸಸ್ಥಳ : ಬಸವಕಲ್ಯಾಣ ದಿನಾಂಕ:25.07.2023

ಸತ್ಯ ಪ್ರತಿಜ್ಞೆಯ ಮೇರೆಗೆ.

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ:**

ನಾನು ದಿ:06.01.2010 ರಿಂದ 31.07.2018 ರವರೆಗೆ ಕಲಬುರಗಿ ಆರಟಿಓ ಕಛೇರಿಯಲ್ಲಿ ಕಾರ್ಯ ನಿರ್ವಹಿಸಿರುತ್ತೇನೆ.

ದಿ:10.05.2017 ರಂದು ಸಿಪಿಐ ಆಳಂದ ಠಾಣೆಯಿಂದ ಮನವಿ ಪತ್ರ ಸ್ವಿಕರಿಸಿ ಅದೇ ದಿನ ಬೆಳಿಗ್ಗೆ 11.40 ಗಂಟೆಗೆ ಕಡಗಂಚಿ ಓ.ಪಿ. ಕಚೇರಿಗೆ ಭೇಟಿ ನೀಡಿ ಅಲ್ಲಿ ಎರಡು ವಾಹನಗಳನ್ನು ತಪಾಸಣೆ ಮಾಡಿರುತ್ತೇನೆ. 1) ಕೆಎ-32/ಸಿ-6448 ಮೋಟರ ಮಾರುತಿ ಸುಜುಕಿ ಮೋಟರ ಕ್ಯಾಬ ಈ ವಾಹನ ತಪಾಸಣೆ ಮಾಡಿದಾಗ ಈ ಕೆಳಗಿನಂತ ಕಂಡು ಬಂದಿರುತ್ತದೆ. ಮುಂಭಾಗದ ವಿಂಡ ಸ್ಕ್ರಿನ ಗ್ಲಾಸ ಹಾಗೂ ಫ್ರೇಮ ಜಖಂಗೊಂಡಿರುತ್ತದೆ, ಮುಂಭಾಗದ ಬಂಪರ, ಇಂಜಿನ ಬೋನೇಟ್, ಟಾಪ್ ಹುಡ್ ಬಾಡಿ ಜಖಂಗೊಂಡಿರುತ್ತದೆ, ಮುಂಭಾಗದ ಬಲಬದಿಯ ಇಂಡಿಕೇಟರ ಹಾಗೂ ಹೆಡಲೈಟ ಜಖಂಗೊಂಡಿರುತ್ತದೆ. ಮುಂಭಾಗದ ಬಲಭಾಗದ ಫೆಂಡರ, ಎಸಿ, ರೇಡಿಯೇಟರ ಯನಿಟ್, ಎಡಬದಿಯ ಫೆಂಡರ, ಮುಂಭಾಗದ ಎಡಬದಿಯ ಡೋರ ಹಾಗೂ ಡೋರ ಗ್ಲಾಸ ಜಖಂಗೊಂಡಿರುತ್ತದೆ.

2) ಕೆಎ-32/ಇಬಿ-3268 ಮೋಟರ ಸೈಕಲ ಸ್ಪೆಂಡರ ಮುಂಭಾಗದ ಚಕ್ರ, ಮಡ್ ಗಾರ್ಡ, ಮುಂಭಾಗದ ಎರಡು ಬದಿಯ ಫೋಕ್ಸ, ಲೆಗ್ ಗಾರ್ಡ, ಹ್ಯಾಂಡಲ್, ಸ್ಪಿಡೋ ಮೀಟರ, ಫಯಲ ಟ್ಯಾಂಕ, ಮುಂಭಾಗದ ಎರಡು ಬದಿಯ ಇಂಡಿಕೇಟರ್ಸ, ಹೆಡಲೈಟ, ಫಟ್ ರೆಸ್ಟ, ಇಂಜೀನ ಹಾಗೂ ಚಸ್ಸಿ ಜಖಂಗೊಂಡಿರುತ್ತದೆ, ಎರಡು ಬದಿಯ ಸೈಡ ಕವರ್ಸ, ಸೈಲೆನ್ಸರ ಪೈಪ ಜಖಂಗೊಂಡಿರುತ್ತದೆ, ಹಿಂಬದಿಯ ಚಕ್ರದ ಮಡ್ ಗಾರ್ಡ, ಶಾಕ ಅಬಸಾರ್ಬರ, ಎಡಬದಿಯ ಇಂಡಿಕೇಟರ ಜಖಂಗೊಂಡಿರುತ್ತದೆ.

ಸದರಿ ಎರಡು ವಾಹನಗಳನ್ನು ಇದ್ದ ಸ್ಥಿತಿಯಲ್ಲಿ ನೋಡಲಾಗಿ ಬ್ರೇಕ ಸಿಸ್ಟಮ ಸುವ್ಯವಸ್ಥೆಯಲ್ಲಿ ಇದ್ದಿದ್ದು ಕಂಡು ಬಂದಿರುತದ್ದದೆ. ನನ್ನ ಅಭಿಪ್ರಾಯದಲ್ಲಿ ಎರಡು ವಾಹನದ ಅಪಘಾತ ಯಾವುದೇ ತಾಂತ್ರಿಕ ದೋಷದಿಂದ ಆಗಿರುವುದಿಲ್ಲ ಎಂದು ವರದಿಯಲ್ಲಿ ಹೇಳಿರುತ್ತೇನೆ.

ಸಾಕ್ಷಿಗೆ ಈಗ ಎಂವಿಎ ವರದಿ ತೋರಿಸಲಾಗಿ ಅದರಲ್ಲಿರಮ ಸಹಿ ಗುರುತಿಸಿದ್ದು ವರದಿಯನ್ನು ನಿಪಿ-17 ಎಂದು

ಸಾಕ್ಷಿಯ ಸಹಿಯನ್ನು ನಿಪಿ-17(ಎ) ಎಂದು ಗುರುತಿಸಲಾಯಿತು.

**ಪಾ. ಸವಾಲುಃ- ಆರೋಪಿತರ ಪರ ಎಸ.ಎಸ.ಸಿ. ವಕೀಲರಿಂದಃ**

ನಾನು ತಪಾಸಣೆ ಮಾಡಿದಾಗ ವಾಹನಗಳ ಭಾವಚಿತ್ರವನ್ನು ತೆಗೆದುಕೊಂಡಿರುವುದಿಲ್ಲ. ವಾಹನಗಳು ಸ್ಟಾಟ ಮಾಡಿ ನೋಡಿದಾಗಲೇ ಅದರ ಕಂಡಿಶನ ಗೊತ್ತಾಗುತ್ತದೆ ಎಂದರೆ ಸರಿ. ನಾನು ಎರಡು ವಾಹಗಳನ್ನು ಸ್ಟಾಟ ಮಾಡಿ ನೋಡಿರುವುದಿಲ್ಲ. ನಾನು ತಪಾಸಣೆ ಮಾಡಿದಾಗ ಕಾರ ಮುಂಭಾಗದಲ್ಲಿ ಅಗಿರುವ ಜಖಂಗಳು ಒಬ್ಬ ವ್ಯಕ್ತಿ ದ್ವಿಚಕ್ರವಾಹನವನ್ನು ಅತಿ ವೇಗವಾಗಿ ಚಲಾಯಿಸಿಕೊಂಡು ಬಂದು ಡಿಕ್ಕಿಪಡಿಸಿದರೆ ಅಗುತ್ತದೆ ಎಂದರೆ ಸರಿ. ದ್ವಿಚಕ್ರವಾಹನು ಅತಿ ವೇಗವಾಗಿ ಚಲಾಯಿಸಿಕೊಂಡು ಬಂದು ಕಾರಿಗೆ ಡಿಕ್ಕಿಪಡಿಸಿದರೆ ಆಗುತ್ತದೆ ಎಂದರೆ ಸರಿ. ದಿಃ10.05.2017 ರಂದು ಸಿಪಿಐ ಆಳಂದ ಠಾಣೆಯಿಂದ ಮನವಿ ಪತ್ರ ಸ್ವಿಕರಿಸಿ ಅದೇ ದಿನ ಬೆಳಿಗ್ಗೆ 11.40 ಗಂಟೆಗೆ ಕಡಗಂಚಿ ಓ.ಪಿ. ಕಚೇರಿಗೆ ಭೇಟಿ ನೀಡಿ ಅಲ್ಲಿ ಎರಡು ವಾಹನಗಳನ್ನು ತಪಾಸಣೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಿಪಿಐ ರವರ ಮಾತು ಕೇಳಿ ಪ್ರಕರಣಕ್ಕೆ ಅನುಕೂಲವಾಗಲು ಸುಳ್ಳು ವರದಿಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ.